48(482) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶ್ರೀ ಮೂಕಾಂಬಿಕಾ ದೇವಸ್ಥಾನ ಕೊಲ್ಲೂರು ಇದರ ಅಧೀನ ಸಂಸ್ಥೆಗಳಲ್ಲಿ 2000ನೇ ವರ್ಷದಿಂದೀಚೆಗೆ ಎಷ್ಟು ಹುದ್ದೆಗಳನ್ನು ಸೃಷ್ಟಿಸಲಾಗಿದೆ;

ಆ) ಅವುಗಳಲ್ಲಿ ಎಷ್ಟು ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗಿದೆ;

ಇ) ಇದಕ್ಕೆ ನಿಯಮಾನುಸಾರ ಮೀಸಲಾತಿಯನ್ನು ಪಾಲಿಸಲಾಗಿದೆಯೇ;

ಈ) ಸರ್ಕಾರ ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) 33 ಹುದ್ದೆಗಳನ್ನು ಸೃಷ್ಟಿಸಲಾಗಿರುತ್ತದೆ.

ಆ) ಸೃಷ್ಟಿಸಲಾದ ಎಲ್ಲಾ 33 ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗಿದೆ.

ಇ) ದೇವಾಲಯ ವತಿಯಿಂದ ನಿರ್ವಹಿಸಲಾಗುತ್ತಿರುವ ಅಧೀನ ಸಂಸ್ಥೆಗಳಲ್ಲಿ ಒಂದು ಸಂಸ್ಥೆ ಮಾತ್ರ ಅನುದಾನಿತವಾಗಿದ್ದು, ಉಳಿದ 5 ಅನುದಾನ ರಹಿತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುತ್ತವೆ. ಸದರಿ ಸಂಸ್ಥೆಗಳ ಸಿಬ್ಬಂದಿಗಳಲ್ಲಿ ಹಿಂದುಳಿದ ವರ್ಗ 2-(ಎ), ಎಸ್.ಸಿ. ಮತ್ತು ಎಸ್.ಟಿ. ಅಭ್ಯರ್ಥಿಗಳನ್ನು ಕೆಳಕಂಡಂತೆ ನೇಮಕಗೊಳಿಸಲಾಗಿದೆ:-

1. ಎಸ್.ಟಿ. -2
2. ಎಸ್.ಟಿ. -2
3. ಹಿಂದುಳಿದ ವರ್ಗ 2(ಎ) -4

ಈ) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಮತ್ತು ನಿಯಮ 2002, ದಿ:01/05/2003 ರಿಂದ ಜಾರಿಗೆ ಬಂದಿದ್ದು, ಸದರಿ ಶಾಸನದಲ್ಲಿ ನೇಮಕಾತಿ ಸೆಕ್ಷನ್ 9 ರಿಮದ 16 ರವರೆಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಹಶಿಕ್ಷಕರನ್ನು 6 ತಿಂಗಳು, 9 ತಿಂಗಳು ಮತ್ತು ಶೈಕ್ಷಣಿಕ ವರ್ಷದ ಅವಧಿಗೆ ಸಂಚಿತ ಸಂಭಾವನೆ ಮೇರೆಗೆ ಕಾರ್ಯನಿರ್ವಹಿಸಿ ಕೊಳ್ಳಲು ಅನುಮತಿ ನೀಡಿದೆ.

ತಡೆಯಾಜ್ಞೆ ತೆರವಾದ ನಂತರ ನಿಯಮಾನುಸಾರ ಮೀಸಲಾತಿಯನ್ನು ಒಳಗೊಮಡಂತೆ ಎಲ್ಲಾ ಹುದ್ದೆಗಳಿಗೆ ನೇಮಕಾತಿ ಕ್ರಮ ಕೈಗೊಳ್ಳಲಾಗುವುದು.

49(483) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ ಮೆಸ್ಕಾಂ 172 ಉಪ ಗ್ರಾಮ ವಿದ್ಯುದ್ಧೀಕರಣ ಯೋಜನೆ ಮಂಜೂರು ಮಾಡಿದ್ದು ಅವುಗಳಲ್ಲಿ ಎಷ್ಟು ಯೋಜನೆಗಳು ಅನುಷ್ಟಾನಗೊಂಡಿವೆ:

ಆ) ಉಳಿದ ಯೋಜನೆಗಳನ್ನು ಯಾವಾಗ ಅನುಷ್ಟಾನಗೊಳಿಸಲಾಗುತ್ತವೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ 8 ಹಾಗೂ 170 ಉಪಗ್ರಾಮಗಳ ವಿದ್ಯುದೀಕರಣಕ್ಕಾಗಿ 2 (ಎರಡು) ಪ್ರತ್ಯೇಕ ಯೋಜನೆಗಳನ್ನು ತಯಾರಿಸಿ ಗ್ರಾಮೀಣ ವಿದ್ಯುದೀಕರಣ ನಿಗಮಕ್ಕೆ ಕಳುಹಿಸಿಕೊಡಲಾಗಿತ್ತು. ಅವುಗಳಲ್ಲಿ 8 ಉಪ ಗ್ರಾಮಗಳ ವಿದ್ಯುದೀಕರಣ ಪ್ರಕ್ರಿಯೆ ಈಗಾಗಲೇ ಮುಗಿದಿರುತ್ತದೆ.

ಆ) ಉಳಿದ 170 ಉಪಗ್ರಾಮಗಳ ವಿದ್ಯುದೀಕರಣಕ್ಕೆ ಗ್ರಾಮೀಣ ವಿದ್ಯುದೀಕರಣ ನಿಗಮ ವತಿಯಿಂದ ಮಂಜೂರಾತಿ ದೋರೆತಿದ್ದು ಮುಂದಿನ ಕ್ರಮ ಜರುಗಿಸಲಾಗುತ್ತಿದೆ. ಈ ಉಪಗ್ರಾಮಗಳ ವಿದ್ಯುದೀಕರಣವನ್ನು 2005–06ನೇ ಆರ್ಥಿಕ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುವುದು.

50(484) ಶ್ರೀ ಗೋಪಾಲ ಪೂಜಾರಿ.ಕೆ (ಬೈಂದೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಉಡುಪಿ ಜಿಲ್ಲೆಯಲ್ಲಿ ರಾಷ್ಟ್ರೀಯ ಕುಟುಂಬ ಸಹಾಯ ಧನ ಯೋಜನೆಯು ಮಂಜೂರಾಗಿ ಹಣ ಪಾವತಿಗೆ ಬಾಕಿ ಇರುವ ಪ್ರಕರಣಗಳೆಷ್ಟಿವೆ.

ಆ) ಬಾಕಿ ಪಾವತಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) 3325 ಪ್ರಕರಣಗಳು ಬಾಕಿ ಇದೆ.

ಆ) ಅನುದಾನ ಒದಗಿಸಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಜಿಸಲಾಗುತ್ತಿದೆ.

51(485) ಶ್ರೀ ಗೋಪಾಲಪೂಜಾರಿ. ಕೆ (ಬೈಂದೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ ಗುತ್ತಿಗೆದಾರರಿಗೆ ಇಲಾಖಾವತಿಯಿಂದ ಡಾಂಬರು ಸರಬರಾಜು ಮಾಡಿದ್ದಲ್ಲಿ, ರಸ್ತೆಯ ಗುಂಡಿ ದುರಸ್ತಿ ಅಕ್ಟೋಬರ್ ತಿಂಗಳಿನಲ್ಲಿ ಮುಗಿಸಲು ಅನುಕೂಲವಾಗುವುದರಿಂದ ಇಲಾಖಾ ವತಿಯಿಂದಲೇ ಮಾಡಲು ಡಾಂಬರು ಸರಬರಾಜಿಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೈಂದೂರು ವಿಧಾನಸಭಾ ಸಭಾ ಕ್ಷೇತ್ರದಲ್ಲಿ ಗುತ್ತಿಗೆದಾರರಿಗೆ ಯಾವುದೇ ರಸ್ತೆ ಕಾಮಗಾರಿಗಳಿಗೆ ಇಲಾಖಾವತಿಯಿಂದ ಡಾಂಬರು ಸರಬರಾಜು ಮಾಡಿರುವುದಿಲ್ಲ. ಗುತ್ತಿಗೆ ಕರಾರಿನ ಅನ್ವಯ ಕಾಮಗಾರಿ ವಹಿಸಿಕೊಂಡು ಗುತ್ತಿಗೆದಾರರೇ ಎಲ್ಲಾ ಸಾಮಗ್ರಿಗಳನ್ನು ಒದಗಿಸಿಕೊಳ್ಳ ಬೇಕಾಗಿರುವುದರಿಂದ ಡಾಂಬರನ್ನು ಇಲಾಖಾ ವತಿಯಿಂದ ಸರಬರಾಜು ಮಾಡಲು ಅವಕಾಶ ವಿರುವುದಿಲ್ಲ.

52(866) ಶ್ರೀ ಗೋಪಾಲಕೃಷ್ಣ ಬೇಲೂರು ಬಿ.ಕೆ. (ಸಾಗರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆ ಸಾಗರ ಕ್ಷೇತ್ರ ವ್ಯಾಪ್ತಿಯಲ್ಲಿ ವಿದ್ಯುದ್ದೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದಿಯೇ:

ಆ) ಹಾಗಿದ್ದಲ್ಲಿ, ಯಾವಾಗಿನಿಂದ ಅನುಷ್ಠಾನಗೊಳಿಸಲಾಗಿದೆ:

ಇ) ಇದುವರೆಗೆ ಸಾಗರ ತಾಲ್ಲೂಕು ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಗ್ರಾಮಗಳ ಸಂಖ್ಯೆ ಎಷ್ಟು:

ಈ) ಈ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ನೀಡಲು ಯಾವ ಯೋಜನೆ ಹಮ್ಮಿಕೊಳ್ಳಲಾಗಿದೆ:

ಉ) ಯಾವಾಗ ಮುಗಿಸಲಾಗುವುದು ಹಾಗೂ ಇದಕ್ಕೆ ನಿಗದಿಪಡಿಸಿರುವ ಹಣವೆಷ್ಟು:

ಊ) ಹ್ಯಾಮ್ಲೆಟ್ ಯೋಜನೆಯಡಿಯಲ್ಲಿ ಈಗಾಗಲೇ ಗುರುತಿಸಿರುವ ಗ್ರಾಮಗಳ್ಯಾವುವು (ಆರ್.ಇ.ಸಿ) ಹಾಗೂ ಈ ಕಾಮಗಾರಿ ಕೆಲಸ ಯಾವ ಹಂತದಲ್ಲಿದೆ: